**ಸಿ.ಸಿಃ 1596/2022**
**ಪಿ.ಡಬ್ಲ್ಯೂ.1**

ಮಧ್ಯಂತರ ಅರ್ಜಿ ಕಲಂ **311** ಸಿ ಆರ್ ಪಿಸಿ ಮೇಲಿನ ಆದೇಶದ ಮೇರೆಗೆ

ಇಂದು ದಿನಾಂಕ 19-12-2022 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದಃ**

ನಾನು ಡಿಪ್ಲೊಮಾ ಮೆಕಾನಿಕ್ ಓದಿರುತ್ತೇನೆ. ದೂರುದಾರ ಕಂಪನಿಯು ನೊಂದಾಯಿತ ಸಂಸ್ಥೆಯಾಗಿರುತ್ತದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲಾ. ದೂರುದಾರ ಕಂಪನಿಯು ಪ್ರೈವೇಟ್ ಲಿಮಿಟೆಡ್ ಕಂಪನಿಯಾಗಿರುತ್ತದೆ. ಸದರೀ ಕಂಪನಿಯು ನಿರ್ದೇಶಕರನ್ನು ಮತ್ತು ಆಡಳಿತ ಮಂಡಳಿಯನ್ನು ಹೊಂದಿರುತ್ತದೆ. ಅದರ ಎಂ ಡಿ ಅಪ್ಪಾಸಾಹೇಜ ಜೀನಗೌಡ ಆಗಿರುತ್ತಾರೆ. ನಾನು ನಿರ್ದೇಶಕನಾಗಿರುತ್ತೇನೆ. ಕಂಪನಿಯಿಂದ ಈ ಪ್ರಕರಣ ನಡೆಸಲು ನನಗೆ ಪ್ರತ್ಯೇಕ ಅಧಿಕಾರ ಪತ್ರ ನೀಡಿರುವುದಿಲ್ಲಾ. ನನಗೆ ಈ ಪ್ರಕರಣ ನಡೆಸಲು ದೂರುದಾರ ಕಂಪನಿಯ ಎಂ ಡಿ ಯವರು ಅಧಿಕಾರ ನೀಡಿರುತ್ತಾರೆ. ಆ ಬಗ್ಗೆ ದಾಖಲೆ ಇರುವುದಿಲ್ಲಾ. ನಮ್ಮ ಕಂಪನಿಯ ಬೈಲಾದ ಪ್ರಕಾರ ನಾನೇ ಪ್ರಕರಣವನ್ನು ನಡೆಸಬಹುದು ಎಂದು ಇರುವುದಿಲ್ಲಾ. ಈ ಪ್ರಕರಣದಲ್ಲಿ ನಾನೇ ಪ್ರಕರಣವನ್ನು ನಡೆಸಲು ನ್ಯಾಯಾಲಯದಿಂದ ಪ್ರತ್ಯೇಕ ಅನುಮತಿ ಪಡೆದಿಲ್ಲಾ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನನಗೆ ಸಂಪೂರ್ಣ ಮಾಹಿತಿ ಇರುತ್ತದೆ. ನನ್ನ ದೂರಿನಲ್ಲಿ ದೂರುದಾರ ಕಂಪನಿಯಿಂದ ನನಗೆ ಪ್ರಕರಣ ನಡೆಸಲು ಅಧಿಕಾರ ನೀಡಿದ್ದಾರೆ ಎಂದು ಕಾಣಿಸಿರುವುದಿಲ್ಲಾ.

ದೂರುದಾರ ಕಂಪನಿಯು 2014 ರಿಂದ ಟಾಫೆ ಟ್ರ್ಯಾಕ್ಟರಗಳನ್ನು ಮಾರಾಟ ಮಾಡುವ ಡೀಲರ್ ಶೀಫನ್ನು ನಡೆಸುತ್ತಿರುತ್ತದೆ. ನಮ್ಮ ಮತ್ತು ಸದರೀ ಟ್ರ್ಯಾಕ್ಟರ ಕಂಪನಿಯ ಮಧ್ಯೆ ಒಪ್ಪಂದ ಆಗಿರುತ್ತದೆ. ಆ ಬಗ್ಗೆ ದಾಖಲೆ ಹಾಜರುಪಡಿಸಿಲ್ಲಾ

ಎಂದರೆ ನಿಜ. 1 ನೇ ಆರೋಪಿ ಫಜನ್ ಟ್ಯಾಕ್ಟರ್ಸ ಇವರೊಂದಿಗೆ 2014 ರಿಂದ ವ್ಯವಹಾರ ಪ್ರಾರಂಬಿಸಿದ್ದೆವು. ಅದಕ್ಕೂ ಪೂರ್ವದಲ್ಲಿ ನಮ್ಮಿಬ್ಬರ ಮಧ್ಯೆ ಕರಾರು ಪತ್ರಗಳು ಆಗಿರುತ್ತವೆ. ದಿಃ 20-03-2014 ರಂದು ನಮ್ಮಿಬ್ಬರ ಮಧ್ಯೆ ಕರಾರು ಆಗಿದ್ದು ಅದರಂತೆ ನಾವು 1 ನೇ ಆರೋಪಿಗೆ ಕ್ರೆಡಿಟ್ ಬೇಸ ಮೇಲೆ ಟ್ಯಾಕ್ಟರಗಳನ್ನು ಮಾರಾಟ ಮಾಡಲು ನೀಡುವುದು ಎಂದು ಕರಾರು ಆಗಿತ್ತು. ಸದರೀ ಕರಾರು ನೊಂದಣಿಯಾಗಿರಲಿಲ್ಲಾ. ಸದರೀ ಕರಾರು ಪತ್ರ ವನ್ನು ಹಾಜರುಪಡಿಸಿದ್ದೇನೆ. ದಿಃ 17-05-2014 ರಿಂದ 31-10-2017 ರವರೆಗೆ 1 ನೇ ಆರೋಪಿಗೆ ಕ್ರೆಡಿಟ್ ಬೇಸ ಮೇಲೆ ವಾಹನಗಳನ್ನು ಪೂರೈಸಿರುತ್ತೇವೆ. ಆ ಬಗ್ಗೆ ನಾವು ಪ್ರತಿ ವಾಹನಕ್ಕೆ ಸಂಬಂಧಿಸಿದಂತೆ ಇನ್ವಾಯಿಸ್ ನ್ನು ನೀಡುತ್ತೇವೆ ಎಂದರೆ ನಿಜ. ಸದರಿ ಇನ್ವಾಯಿಸ್ ನ ಎರಡು ಪ್ರತಿಗಳನ್ನು ಡೀಲರ್ ಗಳಿಗೆ ನೀಡುತ್ತೇವೆ ಮತ್ತು ಒಂದನ್ನು ನಾವು ಇಟ್ಟುಕೊಳ್ಳುತ್ತೇವೆ. ಸದರೀ ಅವಧಿಯಲ್ಲಿ ನಾವು 1 ನೇ ಆರೋಪಿಗೆ ಒಟ್ಟು ಎಷ್ಟು ವಾಹನಗಳನ್ನು ಮಾರಾಟ ಮಾಡಿದ್ದೇವೆ ಎಂದು ದಾಖಲೆ ಹಾಜರುಪಡಿಸಿಲ್ಲಾ ಎಂದರೆ ನಿಜ. ಅದೇ ರೀತಿ ಇನ್ವಾಯಿಸ್‌ಗಳನ್ನು ಸಹ ಹಾಜರುಪಡಿಸಿಲ್ಲಾ ಎಂದರೆ ನಿಜ. 1 ನೇ ಆರೋಪಿಯಿಂದ ಕರಾರು ಪತ್ರದ ಸಮಯದಲ್ಲಿ ಪ್ಯಾನ್ ಕಾರ್ಡ, ಸೇಲ್ ಟ್ಯಾಕ್ಸ ರಜಿಸ್ಟೇಶನ್, ಡೀಲರ್ ಶೀಫ ಲೆಟರ್ ಮುಂತಾದ ದಾಖಲೆಗಳನ್ನು ಪಡೆದುಕೊಂಡಿದ್ದೇವು. ಕಂಪನಿಯ ಪರವಾಗಿ ಅಪ್ಪಾಸಾಹೇಬ ಜೀನಗೌಡ ಕರಾರು ಪತ್ರದ ಸಮಯದಲ್ಲಿ ಹಾಜರಿದ್ದರು, ಸದರೀಯವರೇ ಕರಾರು ಪತ್ರಕ್ಕೆ ಸಹಿ ಮಾಡಿದ್ದಾರೆ. ನಾನು ಸದರೀ ಪತ್ರಕ್ಕೆ ಸಹಿ ಮಾಡಿರುವುದಿಲ್ಲಾ.

ದಿಃ 17-05-2014 ರಿಂದ 31-10-2017 ರವರೆಗೆ ವಾಹನಗಳನ್ನು ಖರೀದಿಸಿದ್ದರ ಬಾಬತ್ತು 1 ನೇ ಆರೋಪಿ ನಮಗೆ ಅಂದಾಜು ರೂ. 8 ಕೋಟಿ ಹಣ ಪಾವತಿಸಿರುತ್ತಾರೆ. ನಾನು ಸಂಬಂದಪಟ್ಟ ಅಕೌಂಟ್ಸ ಸ್ಟೇಟಮೆಂಟ ನ್ನು ನೋಡಿರುತ್ತೇನೆ. ಅದರಂತೆ ಅಂದಾಜು 161 ವಾಹನಗಳನ್ನು ನಾವು 1 ನೇ ಆರೋಪಿಗೆ ಮಾರಾಟ ಮಾಡಿರುತ್ತೆವೆ. ಅದರ ಬಿಲ್ಲಿಂಗ್ ಹಣ ಸುಮಾರು ರೂ. 9 ಕೋಟಿ 9 ಲಕ್ಷ ಹಣ ಆಗಿತ್ತು. ಆ ರೀತಿ ನಾವು ಒಟ್ಟು ಎಷ್ಟು ವಾಹನಗಳನ್ನು

ಮಾರಾಟ ಮಾಡಿದ್ದೇವು ಮತ್ತು 1 ನೇ ಆರೋಪಿ ಒಟ್ಟು ಎಷ್ಟು ಹಣ ಪಾವತಿಸಿದ್ದರು ಎಂಬ ಬಗ್ಗೆ ನಾವು ದಾಖಲೆ ಹಾಜರುಪಡಿಸಿಲ್ಲಾ ಎಂದರೆ ನಿಜ. ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ನಿಜ.

2 ನೇ ಆರೋಪಿ ಅವಿದ್ಯಾವಂತನಾಗಿದುದ ಕೇವಲ ಸಹಿ ಮಾತ್ರ ಮಾಡಲು ಬಲ್ಲವನಾಗಿದ್ದು ಆತನಿಗೆ ಓದಲು ಬರೆಯಲು ಬರುವುದಿಲ್ಲಾ ಎಂದರೆ ನನಗೆ ಗೊತ್ತಿಲ್ಲಾ. ದಿಃ 31-08-2019 ರಂದು ಆರೋಪಿ ನಮಗೆ ರೂ. 1,18,90,543/- ಹಾಗೂ ಬಡ್ಡಿ ಹಣ ರೂ. 4,88,464/- ನೀಡಬೇಕಾತ್ತು ಎಂದು ತೋರಿಸಲು ಬುಕ್ಸ ಆಫ್ ಅಕೌಂಟ್ಸ ಹಾಜರುಪಡಿಸಿರುತ್ತೇನೆ. ಸದರೀ ಬುಕ್ ಆಫ್ ಅಕೌಂಟ್ಸ ನಮ್ಮ ಬಳಿ ಇದ್ದಂತಹ ದಾಖಲೆಯನ್ನು ಹಾಜರುಪಡಿಸಿರುತ್ತೇನೆ. ನಮ್ಮ ಕಂಪನಿಯ ಚಾಟರ್ಡ ಅಕೌಂಟೆಟ್ ಬಳಿಯಿಂದ ಸದರೀ ದಾಖಲೆಯನ್ನು ಪಡೆದು ಹಾಜರುಪಡಿಸಲು ತೊಂದರೆ ಇಲ್ಲಾ ಎಂದರೆ ನಿಜ. ಆರೋಪಿ 2014-15 ರಲ್ಲಿ ನಮ್ಮ ಕಂಪನಿಗೆ ಒಟ್ಟು ಹಣ ರೂ. 2,46,32,956/- ಹಣ ಪಾವತಿಸಿದ್ದಾರೆ ಎಂದರೆ ನಿಜ. ಅದೇ ರೀತಿ 2015-16 ರಲ್ಲಿ ಆರೋಪಿ ಒಟ್ಟು ರೂ. 2,52,42,000/- ಹಣ ನೀಡಿರುತ್ತಾರೆ ಎಂದರೆ ಇರಬಹುದು. ಅದೇ ರೀತಿ 2016-17 ನೇ ಸಾಲಿನಲ್ಲಿ ಒಟ್ಟು ರೂ. 2,52,97,000/- ಹಣ ನೀಡಿರುತ್ತಾರೆ ಎಂದರೆ ಇರಬಹುದು. ಆರೋಪಿ ಅದೇ ರೀತಿ 2017-18 ಮತ್ತು 2018-19 ನೇ ಸಾಲಿನಲ್ಲಿ ನಮ್ಮ ಕಂಪನಿಗೆ ಒಟ್ಟು ಎಷ್ಟು ಹಣ ಪಾವತಿಸಿದ್ದಾರೆ ಎಂದು ನನಗೆ ಹೇಳಲು ಬರುವುದಿಲ್ಲಾ. ಈ ಪ್ರಕರಣ ದಾಖಲಿಸುವ ಪೂರ್ವದಲ್ಲಿ ಆರೋಪಿ ನಗದು ರೂಪದಲ್ಲಿ ಯಾವುದೇ ಹಣ ನೀಡಿರುವುದಿಲ್ಲಾ. 2016-17 ನೇ ಸಾಲಿನಲ್ಲಿ ಅಪ್ಪಾಸಾಹೇಬ ಜೀನಗೌಡ ಇವರು ಆರೋಪಿಯಿಂದ ರೂ. 14,90,000/- ನಗದು ಹಣವನ್ನು ಪಡೆದಿರುತ್ತಾರೆ ಎಂದರೆ ಸರಿಯಲ್ಲಾ. ಸದರೀ ವಿಷಯ ನನಗೆ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ.

ನಾವು ಟಫೆ ಟ್ರ್ಯಾಕ್ಟರ ಕಂಪನಿಯವರು ನಿಗದಿಪಡಿಸಿದ ಮಾರಾಟದ ಬೆಲೆಗೆ ಬಿಲ್ಲನ್ನು ಮಾಡಬೇಕಾಗುತ್ತದೆ ಎಂದರೆ ನಿಜ. ಸದರೀ ಕಂಪನಿಯವರು ನಿಗದಿ

ಪಡಿಸಿದ್ದ ಟ್ರ್ಯಾಕ್ಟರದ ಬೆಲೆಗಿಂತ ಹೆಚ್ಚಿನ ಬೆಲೆಗೆ ನಾವು ಇನ್ವಾಯಿಸ್ ನೀಡಿದ್ದೇವು. ಆ ರೀತಿ ನಾವು 2014-15 ನೇ ಸಾಲಿನಿಂದ 2017 ರವರೆಗೆ ಹೆಚ್ಚಿನ ಬೆಲೆಗೆ ಇನ್ವಾಯಿಸ್ ನೀಡಿದ್ದ ಡಿಫೆರೆನ್ಸ ಹಣ ಒಟ್ಟು ಎಷ್ಟು ಆಗುತ್ತಿತ್ತು ಎಂದು ನನಗೆ ಗೊತ್ತಿಲ್ಲಾ. ಆ ರೀತಿ ಹೆಚ್ಚಿನ ಹಣಕ್ಕೆ ಇನ್ವಾಯಿಸ್ ನೀಡಲು ಬರುವುದಿಲ್ಲಾ ಎಂದರೆ ಸರಿಯಲ್ಲಾ. ನಮ್ಮಹಾಗೂ ಆರೋಪಿಯ ಮಧ್ಯೆ ಆದ ಕರಾರಿನಲ್ಲಿ ಆ ರೀತಿ ಹೆಚ್ಚಿನ ಬೆಲೆಗೆ ಇನ್ವಾಯಿಸ್ ನಲ್ಲಿ ನಮೂದಿಸಿ ಮಾರಾಟ ಮಾಡುತ್ತೇವೆ ಎಂದು ಕರಾರು ಆಗಿತ್ತೋ ಇಲ್ಲವೋ ಎಂದು ನನಗೆ ಗೊತ್ತಿಲ್ಲಾ. ಆ ರೀತಿ ಕರಾರು ಪತ್ರ ದಲ್ಲಿ ಕಾಣಿಸಿರುವುದಿಲ್ಲಾ. ಕರಾರು ಪತ್ರ ದಲ್ಲಿ ಕಾಣಿಸದೇ ಇರುವ ಕಾರಣ ನಾವು ಹೆಚ್ಚಿನ ಬೆಲೆಗೆ ಇನ್ವಾಯಿಸ್‌ನ್ನು ನೀಡಲು ಬರುವುದಿಲ್ಲಾ ಎಂದರೆ ಸರಿಯಲ್ಲಾ.

2014-15 ರಿಂದ 2018-19 ರವರೆಗೆ ನಾವು ಒಟ್ಟು ರೂ. 38,46,802/- ಹಣದ ವ್ಯತ್ಯಾಸದ ಹೆಚ್ಚಿನ ಬಿಲ್ಲನ್ನು ಆರೋಪಿಯಿಂದ ಆಕರಿಸಿರುತ್ತೇವೆ ಎಂದರೆ ಇರಬಹುದು. ಆರೋಪಿ ನಮ್ಮಿಂದ 2014-15 ರಿಂದ 2018-19 ರವರೆಗೆ ಒಟ್ಟು ರೂ. 9,64,54,599/- ಮೊತ್ತದ ಬೆಲೆಯ ಟ್ರ್ಯಾಕ್ಟರಗಳನ್ನು ಖರೀದಿಸಿದ್ದರು ಎಂದರೆ ಸರಿಯಲ್ಲಾ. ಸದರಿ ಅವಧಿಯಲ್ಲಿ ಆರೋಪಿಯು ನಮಗೆ ಬ್ಯಾಂಕ ಮೂಲಕ ಹಾಗೂ ನಗದು ರೂಪದಲ್ಲಿ ರೂ. 9,27,67,613/- ಹಣವನ್ನು ನೀಡಿರುತ್ತಾರೆ ಎಂದರೆ ಸರಿಯಲ್ಲಾ.

ಟ್ರ್ಯಾಕ್ಟರಗಳನ್ನು ಖರೀದಿಗೆ ನೀಡುವಾಗ ಇನ್ವಾಯಿಸ್ ರೈಸ್ ಮಾಡಿ ಟ್ರ್ಯಾಕ್ಟರಗಳೊಂದಿಗೆ ನೀಡಬೇಕಾಗುತ್ತದೆ ಎಂದರೆ ನಿಜ. ಸದರೀ ಟ್ರ್ಯಾಕ್ಟರ ಡೀಲರ್ ಗಳಿಂದ ಮಾರಾಟ ಆದ ನಂತರ ಯಾವ ಡೀಲರ್ ನಿಂದ ಟಾಕ್ಟರನ್ನು ಖರೀದಿಸಲಾಗಿದೆ ಎಂದು ಆರ್ ಟಿ ಓ ದಾಖಲೆಗಳಲ್ಲಿಯೂ ಸಹ ನಮೂದು ಆಗುತ್ತದೆ ಎಂದರೆ ನನಗೆ ಗೊತ್ತಿಲ್ಲಾ. ಆ ವಿಷಯ ಗೊತ್ತಿದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲಾ. ಆರೋಪಿ ಸಂಸ್ಥೆಗೆ ನೀಡಲಾದ ಇನ್ವಾಯಿಸ್ ಬಿಲ್ಲುಗಳಿಗೆ ಸಂಬಂಧಿಸಿದಂತೆ ಎಲ್ಲಾ ಟ್ರ್ಯಾಕ್ಟರಗಳನ್ನು ನಾವು ನೀಡಿರುತ್ತೇವೆ. 2014-

15 ರಿಂದ 2018-19 ರವರೆಗೆ ನಾವು ಆರೋಪಿಗೆ ನೀಡಿದ್ದ ಇನ್ವಾಯಿಸ್ ಬಿಲ್ಲುಗಳ ಪೈಕಿ ಒಟ್ಟು 6 ಟ್ಯಾಕ್ಟರಗಳನ್ನು ಕಡಿಮೆ ನೀಡಿರುತ್ತೇವೆ ಎಂದರೆ ಸರಿಯಲ್ಲಾ.

ಆರೋಪಿ ನಿಪಿ 1 ಮತ್ತು ನಿಪಿ 3 ಚೆಕ್ಕು ಗಳನ್ನು ನಮ್ಮ ಕಂಪನಿಗೆ ಮಾರ್ಚ 2014 ರಲ್ಲಿ ಕರಾರು ಪತ್ರದ ಸಮಯಲ್ಲಿ ನೀಡಿರುತ್ತಾರೆ, ಸಾಕ್ಷಿ ಮುಂದುವರೆದು ಕರಾರು ಪತ್ರ ಆದ ನಂತರ ಸದರೀ ಚೆಕ್ಕುಗಳನ್ನು ನೀಡಿರುತ್ತಾರೆ ಎಂದು ಹೇಳುತ್ತಾರೆ. ಚೆಕ್ಕುಗಳನ್ನು ಯಾವ ದಿನಾಂಕದಂದು ನೀಡಿರುತ್ತಾರೆ ಎಂದು ಹೇಳಲು ನನಗೆ ನೆನಪಿಲ್ಲಾ. ನಿಪಿ 1 ಮತ್ತು 3 ಚೆಕ್ಕುಗಳನ್ನು ಒಳಗೊಂಡು ಆರೋಪಿಯು ಒಟ್ಟು 5 ಖಾಲಿ ಚೆಕ್ಕುಗಳನ್ನು ಕೇವಲ ಸಹಿಗಳನ್ನು ಮಾತ್ರ ಮಾಡಿ ನಮಗೆ ನೀಡಿದ್ದರು. ನಿಪಿ 1 ಮತ್ತು 3 ಚೆಕ್ಕುಗಳನ್ನು ನಾವೇ ತುಂಬಿ ಬ್ಯಾಂಕಗೆ ಸಲ್ಲಿಸಿರುತ್ತೇವೆ ಎಂದರೆ ನಿಜ. ಸದರೀ ಚೆಕ್ಕುಗಳನ್ನು ಅಪ್ಪಾಸಾಹೇಬ ಜೀನಗೌಡ ರವರಿಗೆ ಆರೋಪಿ ನೀಡಿದ್ದರು. ನಿಪಿ 1 ಮತ್ತು 3 ಚೆಕ್ಕುಗಳನ್ನು ಅಪ್ಪಾಸಾಹೇಬ ಜೀನಗೌಡ ಇವರಿಗೆ ಆರೋಪಿ ಸಂಸ್ಥೆ ನೀಡಿದ್ದ ಸಂದರ್ಬದಲ್ಲಿ ಆರೋಪಿ ಸಂಸ್ಥೆಯು ನಮ್ಮ ಕಂಪನಿಯಡೆಗೆ ಯಾವುದೇ ಹೊಣೆಗಾರಿಕೆ ಇರಲಿಲ್ಲಾ ಎಂದರೆ ನಿಜ.

**(ಆರೋಪಿ ಪರ ವಕೀಲರು ಸಾಕ್ಷಿಯ ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಮುಂದುವರೆದ ಪಾಟೀ ಸವಾಲಿಗೆ ಮುಂದೂಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸರಿ ಅದೆ.

ಪ್ರ ಹಿ ದಿ ನ್ಯಾ ಹಾಗೂ ಸಿಜೆಎಂ
ಧಾರವಾಡ